ಚಂದ್ರಗುತ್ತಿ ಗ್ರಾಮದಲ್ಲಿ ಮಹಿಳೆಯರು ದೇವರ ಹೆಸರಿನಲ್ಲಿ ಮಾಡಿಡುವ ಪದ್ಧತಿ

೧೩೨೩. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ),—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಂದ್ರಗುತ್ತಿ ಗ್ರಾಮ ಸೊರಬ ಶಿವಮೊಗ್ಗ ಜಿಲ್ಲೆಯಲ್ಲಿ ದೇವರ ಹೆಸರಿನಲ್ಲಿ ಮಹಿಳೆಯರು ಮತ್ತು ಹುಡುಗಿಯರು ನಗ್ನ ಪ್ರದರ್ಶನ ಮಾಡುವ ಪದ್ಧತಿ ಇದೆಯೇ?

ಆ) ಹೌದಾದರೆ ಇದು ಯಾವಾಗಲಿಂದ ಜಾರಿಗೆ ಬಂದಿದೆ.

ಇ) ಇಲ್ಲಿ ಯಾವ ಜಾತಿ ಮತ್ತು ವರ್ಗದವರಲ್ಲಿ ನಗ್ನ ಪ್ರದರ್ಶನ ಮಾಡುತ್ತಾರೆ?

ಈ) ಈ ಮೂಢನಂಬಿಕೆಯನ್ನು ನಿಲ್ಲಿಸಲು ಸರ್ಕಾರದವರು ಪ್ರಯತ್ನವನ್ನು ಮಾಡಿದ್ದಾರೆಯೇ?

ಉ) ೧೯೬೭-೬೮ರಲ್ಲಿ ಈ ಪದ್ಧತಿಯನ್ನು ನಿಲ್ಲಿಸಲು ಯಾವ ರಾಜಕೀಯ ಸರ್ಕಾರದವರು ಕ್ರಮ ಕೈಗೊಂಡಿದ್ದಾರೆ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಈಗ ಇರುವುದಿಲ್ಲ. ಹಿಂದಿನ ವರ್ಷಗಳಲ್ಲಿ ಈ ಪದ್ಧತಿ ಇತ್ತು.

ಆ) ಇದು ಬಹುಶಃ ಪುರಾತನ ಕಾಲದಿಂದ ಬಂದಿರುವ ವಾಡಿಕೆ. ಆದರೆ ಇದಕ್ಕೆ ನಿಗಧಿತ ಕಾಲ ಯಾವುದೆಂದು ಗೊತ್ತಿಲ್ಲ.

ಇ) ಎಲ್ಲಾ ಕೋಮಿನ ಮಹಿಳೆಯರು ಮತ್ತು ಹುಡುಗಿಯರು ಈ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ ಹಿಂದುಳಿದ ಜನಾಂಗದ ಮಹಿಳೆಯರು ಮಾತ್ರ ಬೆತ್ತಲೆ ಸೇವೆಯನ್ನು ಮಾಡುತಾರೆ.

ಈ) ಹೌದು.

೧) ಸಾಮಾಜಿಕ ಸಂಪ್ರದಾಯ ಆಗುವ ತೊಂದರೆಯ ಬಗ್ಗೆ ವ್ಯಾಪಕ ಪ್ರಚಾರವನ್ನು ಈ ಇಲಾಖೆಯೇ ಕೈಗೊಂಡಿದೆ.

೨) ಈ ಜಾತ್ರೆಯ ಸಂದರ್ಭದಲ್ಲಿ ಸ್ಥಳೀಯ ಆರಕ್ಷಕರು ಮಹಿಳಾ ಮಂಡಲ ಮತ್ತು ಯುವತಿ ಮಂಡಲದವರಿಂದ ಕರಪತ್ರಗಳನ್ನು ಹಂಚುವ ಮುಖಾಂತರ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಿಕೆ ಮಂಡಲ ಹಾಗೂ ಮೂಢನಂಬಿಕೆಯನ್ನು ಹೋಗಲಾಡಿಸಿ ಸಾಮಾಜಿಕ ಪ್ರಜ್ಞೆ ಬೆಳೆಯುವಂತೆ ಮಾಡಲಾಗಿದೆ,

೩) ಹಳ್ಳಿಗಳಲ್ಲಿ ಯುವಕ ಕೇಂದ್ರಗಳ ಮುಖಾಂತರ ಶಿಬಿರಗಳ ಸಂಘಟನೆಗಳನ್ನು ಏರ್ಪಾಡು ಮಾಡಲಾಗಿದೆ.

೪) ಜಿಲ್ಲಾ ಮಟ್ಟದ ಸಂಕೀರ್ಣಗಳನ್ನು ಚಂದ್ರಗುತ್ತಿಯಲ್ಲಿ ಅಲ್ಲದೆ ಆಕ್ಕಪಕ್ಕದ ಹಳ್ಳಿಗಳಾದ ಕಂಪ್ಪಗಡ್ಡ, ಜೆಡೆ, ಆನವಟ್ಟಿ ಮತ್ತು ಸೊರಬಗಳಲ್ಲಿ ನಡೆಸಲಾಗಿದೆ.

೫) ಇದರ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಬೀದಿ ನಾಟಕಗಳ ಮುಖಾಂತರ ತಿಳುವಳಿಕೆ ನೀಡಿರುತ್ತಾರೆ.

೬) ಕಳೆದ ವರ್ಷದಿಂದ ಈ ಜಾತ್ರೆಯನ್ನು ನಿಲ್ಲಿಸಲು ಕ್ರಮಕ್ಕೆಗೊಳ್ಳಲಾಗಿದೆ.

ಉ) ಕರ್ನಾಟಕ ಸರ್ಕಾರ ಮಾರ್ಚಿ ೧೯೬೭-೬೮ ರಿಂದ ಈ ಜಾತ್ರೆಯನ್ನು ನಿಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ನನ್ನ ಮೊದಲನೆಯ ಪ್ರಶ್ನೆ ಏನಿದೆ ಅಂದರೆ, 'ತಾವು ನಂಬಿರುವ ದೇವರನ್ನು ಪೂಜಿಸುವ ಸಲುವಾಗಿ ಮಹಿಳೆಯರು ಹಾಗೂ ಹೆಣ್ಣು ಮಕ್ಕಳು ಬೆತ್ತಲೆ ಸೇವೆ ಮಾಡುವ ಪದ್ಧತಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಚಂದ್ರಗುತ್ತಿ ಗ್ರಾಮದಲ್ಲಿದೆಯೆ' ಎಂದು ಕೇಳಿದ್ದೇನೆ. ಇವರು ಏನು ಹೇಳಬೇಕಾಗಿತ್ತೆಂದರೆ ಅದು ನ್ಯಾಯವಾಗಿತ್ತು ಯಂದು ಹೇಳಬೇಕು, ಈಗ ನಿಲ್ಲಿಸಿದ್ದೇವೆಂದು ಹೇಳಬೇಕು. ಈ ಬೆತ್ತಲೆ ಸೇವೆ ಪದ್ಧತಿಯಲ್ಲಿ ಹಿಂದುಳಿದ ವರ್ಗದವರು ಇದ್ದಾರೆಂದು

ಹೇಳಿದ್ದಾರೆ. ಹಿಂದುಳಿದ ವರ್ಗದವರು ಅಂದರೆ ಯಾರು? ಇದರಲ್ಲಿ ಬೇಡರು ಇದ್ದಾರೆಯೆ? ಬೆಸ್ತರು ಇದ್ದಾರೆಯೆ? ಲಂಬಾಣಿಯರು ಇದ್ದಾರೆಯೆ? ಯಾರಿದ್ದಾರೆ ಅದನ್ನು ಹೇಳಿ?

SRI G. BASAVANNAPPA.—In the broader sense, lower castes.

ಶ್ರೀ ಬಿ. ಬಸವಲಿಂಗಪ್ಪ.—ಅವರು ಯಾರ್ಯಾರಿದ್ದಾರೆ? ಹೊಲೇರು, ಮಾದಿಗರು ಮೋಚಿಗರ್ ಹೋಗುತ್ತಾರೆಯೇ, ಬೇಡರು, ಬೆಸ್ತರು ಹೋಗುತ್ತಾರೆಯೇ? ದಲಿತರು ಇರಲಿ ನಾನು ಹೋಮರು ಮಿನಿಸ್ಟರ್ ಆಗಿದ್ದಾಗ ರೋಣ ತಾಲ್ಲೂಕಿನ ಒಂದು ಜಾಗಕ್ಕೆ ಹೋದಾಗ ಅಲ್ಲಿ ಕಾಮದಹನ ಮಾಡುತ್ತಿದ್ದರು. ಕಾಮದಹನ ಅಂದರೆ ಹೊಲೇರು ಮಾದಿಗರು ಹಾಗೂ ಬೇಡರ, ಬೆಸ್ತರ ಹೆಣ್ಣು ಮಕ್ಕಳನ್ನು ಕಾಮದಹನ ಮಾಡುತ್ತಿದ್ದರು, ನಾನು ಅದನ್ನು ಒಂದೇ ವರ್ಷದಲ್ಲಿ ನಿಲ್ಲಿಸಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ,— ನಿಲ್ಲಿಸಿಲ್ಲ.

SRI B. BASAVALINGAPPA.—If it is not so, my information is incorrect. I stopped it at one time. ಗುಲ್ಬರ್ಗದಲ್ಲಿ ಬೇವಿನ ಸೊಪ್ಪಿನ ಸೇವೆಯೆಂದು ಮಾಡುತ್ತಿದ್ದಾರೆ. ಅಲ್ಲಿ ಹೆಣ್ಣು ಮಕ್ಕಳು ಸೂಳೆ ತರಹ ವರ್ತನೆ ಮಾಡುತ್ತಿದ್ದಾರೆ. ಬೇವಿನ ಸೊಪ್ಪನ್ನು ಸೊಂಟಕ್ಕೆ ಕಟ್ಟಿಕೊಂಡು ಮೆರವಣಿಗೆ ಮಾಡಿ ಊರಿನವರ ಜೊತೆ ಸಂಬಂಧವಿಟ್ಟುಕೊಳ್ಳುವುದು ಅಲ್ಲಿ ನಡೆಯುತ್ತಿದೆ. ಚಂದ್ರಗುತ್ತಿಯಲ್ಲಿ ಯಲ್ಲಮ್ಮನ ಗುಡ್ಡದಲ್ಲಿ ಹೊಲ–ಮಾದಿಗರು ಬೆಸ್ತರು, I am talking in a very very crude language today, ಸೇವೆ ಮಾಡುತ್ತಿದ್ದಾರೆ. ಇಂತಹ ಪದ್ಧತಿಯನ್ನು ನಿಲ್ಲಿಸಲಿಕ್ಕೆ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಯಾವ ಕ್ರಮ ತೆಗೆದುಕೊಂಡಿದೆ? ಅದನ್ನು ನಿಲ್ಲಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ? ಯಲ್ಲಮ್ಮನ ಗುಡ್ಡದಲ್ಲಿ ಹೆಣ್ಣು ಮಕ್ಕಳನ್ನು ಸೂಳೆಯರಾಗಿ ಬಿಡತಕ್ಕ ಪದ್ಧತಿ ವರ್ಷೇ ವರ್ಷೇ ನಡೆಯುತ್ತಿದೆ, ಇದಂ ತಮಂಗೆಲ್ಲರಿಗೂ ಗೊತ್ತು. ಮಾನ್ಯ ಸಮಾಜ ಕಲ್ಯಾಣ ಸಚಿವರು ಇದಕ್ಕೆ ಕಾನೂನು ಆಗಿದೆ, ಈ ಪದ್ಧತಿ ಹೋಯಿತು ಎಂದು ಹೇಳಿದರು. ಹೊಗಳುಭಟ್ಟತನ ಕೆಲಸವನ್ನು ಮಂತ್ರಿಯಾಗಿ ಮಾಡಬೇಡಿಯೆಂದು ನಾನು ತಮಗೆ ಅಗಲೂ ಹೇಳಿದ್ದೇನೆ. ಈಗಲೂ ಹೇಳುತ್ತಿದ್ದೇನೆ. ಈ ಪದ್ಧತಿಯನ್ನು ವ್ಯಾಪಕವಾಗಿ ರಾಜ್ಯಾದ್ಯಂತ ನಿಲ್ಲಿಸುವುದಕ್ಕೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಮುಂದಿನ ವರ್ಷ ಇಂತಹ ಪದ್ಧತಿಗಳನ್ನು ನಿಲ್ಲಿಸುವುದಕ್ಕೆ ನೀವು ಏನಾದರೂ ಕಠಿಣವಾಗಿರತಕ್ಕ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ, ಅದನ್ನು ಹೇಳಿ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಹಿಂದುಳಿದ ಜನಾಂಗದವರು ಅಂದರೆ ಯಾರು ಎಂದು ಕೇಳಿದರು. ಸಮಾಜದಲ್ಲಿ ಕೆಳವರ್ಗದಲ್ಲಿರತಕ್ಕ ಜನಾಂಗದವರು ಅದರಲ್ಲಿ ಪರಿಶಿಷ್ಟ ಜಾತಿಯವರು ಜಾಸ್ತಿ ಇದ್ದಾರೆ. There is no second thought. ಈ ಬಗ್ಗೆ ಏಳೆಂಟು ಪಾಯಿಂಟ್‌ಗಳನ್ನು ಹೇಳಿದ್ದೇನೆ. ಮೊದಲು ಈ ಪದ್ಧತಿ ಇತ್ತು, ಈಗ ನಿಲ್ಲಿಸಿದ್ದೇವೆ. 1987-88ರಲ್ಲಿ we have banned that Jatra. The Deputy Commissioner has banned that jatra, ಉಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಬೆತ್ತಲೆ ಸೇವೆಯನ್ನು ಬಿಟ್ಟು ಪೂಜೆಗೆ ಅವಕಾಶ ಮಾಡಿಕೊಡಲಾಗಿದೆ, ಜಿಲ್ಲಾ ಪೋಲಿಸ್ ಸೂಪರ್‌ಂಟೆಂಡೆಂಟ್ ಅವರ ನೇತೃತ್ವದಲ್ಲಿ ಈ ಸಾರಿ ಪೂಜೆ ಮಾಡಿದ್ದಾರೆ. ಬೆತ್ತಲೆ ಸೇವೆಗೆ ಅವಕಾಶ ಇಲ್ಲದಂತೆ ಮಾಡಿದ್ದಾರೆ. ಸರ್ಕಾರ ಈ ಬಗ್ಗೆ ಬಿಗಿಯಾದ ಕಾರ್ಯ ಕ್ರಮಗಳನ್ನು ತೆಗೆದುಕೊಂಡಿದೆ ಎಂಬುದನ್ನು ಹೇಳಿದ್ದೇನೆ ಈ ಬಗ್ಗೆ ಈಗಾಗಲೇ ಏಳೆಂಟು ಪಾಯಿಂಟ್‌ಗಳನ್ನು ಹೇಳಿದ್ದೇನೆ. ಇದು ಸಾಮಾಜಿಕ ಪಿಡುಗು, ಸಮಾಜದಲ್ಲಿ ಬಸವಿ ಬಿಡುವುದು, ಬೆತ್ತಲೆ ಸೇವೆ ಈ ಪದ್ಧತಿಗಳು ಏನಿವೆ, ಇಂತಹ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸುವುದಕ್ಕೆ ಮೂರು ವಿಶೇಷ ಘಟಕಗಳನ್ನು ಬೆಂಗಳೂರು, ಬೀದರ್ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ತೆಗೆದುಕೊಂಡಿದ್ದೇವೆ. ಈ ಘಟಕಗಳ ಉದ್ದೇಶ, ಸಮಾಜದಲ್ಲಿರುವ ಅನಿಷ್ಟ ಪದ್ಧತಿ ಏರಿದೆ, ಅದರ ಬಗ್ಗೆ ತಿಳಿವಳಿಕೆ ಕೊಡುವುದಕ್ಕೆ ಈ ಘಟಕಗಳು ಕೆಲಸ ಮಾಡುತ್ತಿವೆ.

ಇದನ್ನು ಕರಪತ್ರ ಇತ್ಯಾದಿಗಳ ಮುಖಾಂತರ ತಿಳಿಸುತ್ತೇವೆ. ಸಾಕ್ಷ್ಯಚಿತ್ರವನ್ನು ತೆಗೆದಿದ್ದೇವೆ. ಇದಕ್ಕೆ ಯಾರೂ ಪ್ರಚೋದನೆ ಮಾಡುತ್ತಾರೆ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುತ್ತೇವೆ. ಇಂತಹ ಕ್ರಮಗಳನ್ನು ತೆಗೆದುಕೊಂಡು ಇದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ,

ಇದರ ಬಗ್ಗೆ ವಿಶೇಷ ಆಸಕ್ತಿವಹಿಸಿ ಇಂತಹ ಅನಿಷ್ಟ ಪದ್ಧತಿ ಮುಂದುವರೆಯುದಂತೆ ಕ್ರಮ ತೆಗೆದು ಕೊಳ್ಳುತ್ತಿದ್ದೇವೆ

ಶ್ರೀ ಬಿ. ಬಸವಲಿಂಗಪ್ಪ.—ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಂತ ಒಂದು ಇಲಾಖೆ ಇದೆ. ಈ ಇಲಾಖೆ ಏನು ಕ್ರಮ ತೆಗೆದುಕೊಂಡಿದೆ ? ಪ್ರಚಾರ ಮಾಡಬೇಕು. ನಿಲ್ಲಿಸ ಬೇಕು ಸರಿ. ಎಲ್ಲಾ ಹೆಣ್ಣು ಮಕ್ಕಳೂ ಸೂಳೆತನ ಮಾಡಿದರೆ ನಮ್ಮ ಅಭ್ಯಂತರ ಇಲ್ಲ. ಶೆಡ್ಯೂಲ್ಡ್ ಕ್ಯಾಸ್ಟ್ ಹೆಣ್ಣು ಮಕ್ಕಳ ಜೊತೆ ಇತರೇ ಜಾತಿಯ ಹೆಣ್ಣು ಮಕ್ಕಳೂ ಕೂಡ, ಈ ಕೆಲಸ ಮಾಡಲಿ. ಎಲ್ಲಮ್ಮ ಗಂಡ್ಡದಲ್ಲಿ ಎಲ್ಲಾ ಜಾತಿಯವರನ್ನೂ ಸೂಳೆಯರನ್ನಾಗಿ ಬಿಟ್ಟರೆ ನನ್ನ ಅಭ್ಯಂತರ ಇಲ್ಲ. ಆಗ ಅದು ಸಮಾಜವಾದ ಆಗುತ್ತದೆ. ಹೀಗಿರುವಾಗ ಮಕ್ಕಳ ಮತ್ತು ಹೆಣ್ಣು ಮಕ್ಕಳ ಇಲಾಖೆ ಏನು ಕೆಲಸ ಮಾಡುತ್ತಿದೆ? ಅದು ವರ್ಷಂಪ್ರತಿ ಏನು ಕ್ರಮ ತೆಗೆದುಕೊಂಡಿದೆ ಮತ್ತು ಮುಂದಿನ ವರ್ಷ ಏನು ಕ್ರಮ ತೆಗೆದುಕೊಳ್ಳುತ್ತದೆ ? ದಯವಿಟ್ಟು ಹೇಳಿ ?

ಶ್ರೀ ಜಿ. ಬಸವಣ್ಣಪ್ಪ. ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ೧೯೭೫ರಲ್ಲಿ ಪ್ರಾರಂಭವಾಯಿತು. ಅದು ೩ ಕೋಟಿಯಿಂದ ಪ್ರಾರಂಭವಾಗಿ ಈಗ ೮೨ ಕೋಟಿರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಅಂದರೆ ಮಹಿಳೆ ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ಸರ್ಕಾರ ವರ್ಷೆವರ್ಷ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡುಬಂದಿದೆ, ಸಮಾಜದಲ್ಲಿರತಕ್ಕಂಥ ಈ ಅನಿಷ್ಟ ಪದ್ಧತಿ ಶತಮಾನಗಳಿಂದ ಬೆಳೆದುಕೊಂಡು ಬಂದಂಥ ಪದ್ಧತಿ. ಅದ್ದರಿಂದ ಯಾವುದೇ ಕಾರ್ಯಕ್ರಮ.....

ಶ್ರೀ ಬಿ. ಬಸವಲಿಂಗಪ್ಪ.—ಏನು ನೀವು ಮಾತನಾಡುತ್ತೀರಿ? ನೀವು ಇಂಥ ಹೊಗಳುಭಟ್ಟಂಗಿತನ ಮಾಡಬಾರದು. ಶತಮಾನಗಳಿಂದ ಇದು ಇದೆ ಎಂದು ಹೇಳುತ್ತೀರಲ್ಲ, ಆಗ ನೀವು ಇದ್ದಿದ್ದಿರೇನು ? ಈಗ ನಾವು ಇದ್ದೇವೆ. ನಾವು ಇದನ್ನು ನಿಲ್ಲಿಸಬೇಕು. ಶತಮಾನಗಳಿಂದ ಬಂದಿರುವುದನ್ನು ಈಗ ನಿಲ್ಲಿಸಿಬಿಡಿ.

(ಗೊಂದಲ)

ಶ್ರೀ ಜಿ. ಬಸವಣ್ಣಪ್ಪ.—ಚಂದ್ರಗುತ್ತಿಯಲ್ಲಿ ಬೆತ್ತಲೆಸೇವೆ ೮೭-೮೮ರವರೆಗೂ ಇತ್ತು, ನಾವು ಬಂದಮೇಲೆ ಅದನ್ನು ರದ್ದು ಮಾಡಿದ್ದೇವೆ. We have baned it. Is it not an achievement ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದರ ಕ್ರೆಡಿಟ್‌ನ್ನು ನೀವು ತೆಗೆದುಕೊಳ್ಳುವುದಾದರೆ ಹಿಂದೆ ಕೂಡ ನೀವು ಮಂತ್ರಿಯಾಗಿದ್ದವರು. ಹಿಂದೆ ಏಕೆ ಇದನ್ನು ನಿಲ್ಲಿಸಲಿಲ್ಲ ? Don't talk unnecessarily.

ಶ್ರೀ ಆರ್. ವೆಂಕಟರಾಮಯ್ಯ.—ಹಿಂದೆ ಏಕೆ ನಿಲ್ಲಿಸಲಿಲ್ಲ ? ಹೋದವರ್ಷ ಗಲಾಟೆಮಾಡಿದ್ದರಿಂದ ನಿಲ್ಲಿಸಿದ್ದೀರಿ.

ಶ್ರೀ ಜಿ. ಬಸವಣ್ಣಪ್ಪ.—ಶ್ರೀ ಬಸವಲಿಂಗಪ್ಪನವರಿಗೆ ಇದರ ಬಗ್ಗೆ ಎಷ್ಟು ಕಳಕಳಿ ಇದೆಯೋ, ನಮಗೂ ಅಷ್ಟೇ ಕಳಕಳಿ ಇದೆ. ಇದೂ ಒಂದು ಸಮಾಜದಲ್ಲಿರತಕ್ಕಂಥ ಕಳಂಕ. ಈ ಬೆತ್ತಲೆಸೇವೆ, ದೇವದಾಸಿ ಪದ್ಧತಿ, ವರದಕ್ಷಿಣೆ, ಬಾಲ್ಯವಿವಾಹ ಇಂತಹ ಪದ್ಧತಿಗಳನ್ನು ಯಾರು ಒಪ್ಪುತ್ತಾರೆ ? ಅನೇಕ ಬಗೆಯ ಕಾನೂನುಗಳು ಇದ್ದರೂ ಕೂಡ, ಇದು ನಡೆಯುತ್ತಿದೆ. ಸಮಾಜದಲ್ಲಿರತಕ್ಕಂಥ ಕೆಲವು ..

Sri B. Basavalingappa.—We will not tolerate this insult. Here after if you continue as Minister next year, it should be stopped.

ಅಧ್ಯಕ್ಷರು.—ಅವರು ಉತ್ತರ ಹೇಳಿ ಮುಗಿಸಲಿ.

ಶ್ರೀ ಜಿ ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಅವರು ಒಬ್ಬ ಸೀನಿಯರ್ ಸದಸ್ಯರು. ಅವ ಬಗ್ಗೆ ಅಪಾರವಾದ ಗೌರವ ಇಟ್ಟಿದ್ದೇನೆ. I am not after position. ಅಧಿಕಾರ ವ್ಯಾಮೋಹ ಇರತಕ್ಕಂಥ ಮನುಷ್ಯ ನಾನು ಅಲ್ಲ. I am not attached to position. ಈಗ ನಮ್ಮ ಪಕ್ಷ ಇದೆ. ಪಕ್ಷದ ನಾಯಕರಾಗಿ ಶ್ರೀ ರಾಮಕೃಷ್ಣ ಹೆಗಡೆಯವರು ಇದ್ದಾರೆ. ಅವರು ಮಂತ್ರಿ

ಮಂಡಲ ರಚನೆ ಮಾಡಿದ್ದಾರೆ. It is his prerogative. ಶ್ರೀ ಬಸವಲಿಂಗಪ್ಪನವರಿಗೆ ಇದರ ಬಗ್ಗೆ ಹೇಳಂವುದಕ್ಕೆ ಯಾವ ಹಕ್ಕು ಇದೆ ?

ಶ್ರೀ ಬಿ. ಬಸವಲಿಂಗಪ್ಪ.—ನನಗೆ ಎಲ್ಲಾ ಹಕ್ಕೂ ಇದೆ. As a congressman, you were talking the same thing.

ಶ್ರೀ ಬಿ. ಧರ್ಮಪ್ಪ.—ಇದು ಅವರ ಕಾಲದಲ್ಲೂ ಇತ್ತು. ಇದು ಅನೇಕ ವರ್ಷಗಳಿಂದಲೂ ನಡೆಯುತ್ತಾ ಬಂದಿದೆ. ಅವರ ಕಾಲದಲ್ಲಿ ಇದನ್ನು ಏಕೆ ನಿಲ್ಲಿಸಲಿಲ್ಲ ? ಏಕೆಂದರೆ ಆಗ ಇದು ಅವರ ಗಮನಕ್ಕೇ ಬಂದಿರಲಿಲ್ಲ.

ಅಧ್ಯಕ್ಷರು.—ಶ್ರೀ ಬಸವಣ್ಣಪ್ಪನವರೇ, ನಿಮ್ಮ ಉತ್ತರ ಹೇಳಿ ಮುಗಿಸಿರಿ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ. ನಾನು ಪದೇ ಪದೇ ಹೇಳುತ್ತಿದ್ದೇನೆ. ಸಮಾಜದಲ್ಲಿ ಅನೇಕ ದೋಷಗಳು ಇವೆ, ಅನಿಷ್ಟ ಪದ್ಧತಿಗಳು ಇವೆ, ಸಮಾಜದಲ್ಲಿ ಅಸ್ಪೃಶ್ಯತೆ ಇದೆ. ಈ ಅಸ್ಪೃಶತೆಯನ್ನು ಸಂವಿಧಾನದಲ್ಲಿ ಅಬಾಲಿಶ್ ಮಾಡಲಾಗಿದೆ. There is an Untouchablity Act but still the practice prevails. ಇದು ಸರ್ಕಾರ ಒಂದೇ ಅಲ್ಲ, ಎಲ್ಲರೂ ಸೇರಿ, ಈ ದುಷ್ಟ ಪದ್ಧತಿಯನ್ನು ಹೋಗಲಾಡಿಸಬೇಕು. ಬರೀ ಸಮಾಜ ಕಲ್ಯಾಣ ಮಂತ್ರಿಯೊಬ್ಬರೇ ಇದನ್ನು ಬಗೆಹರಿಸಬೇಕೆಂದರೆ ಆಗುವುದಿಲ್ಲ. If Mr Basavalingappa becomes Social Welfare Minister, he cannot erdicate it overnight.

ಅಧ್ಯಕ್ಷರು.—ಮಾನ್ಯ ಖಿರ್ಗೆಯವರೇ ತಾವು ಕೇಳಿ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಬಸವಲಿಂಗಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದರು, ಗೃಹ ಮಂತ್ರಿಗಳಾಗಿದ್ದರು.....

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ.—ಮಾನ್ಯ ಅಧ್ಯಕ್ಷರು, ನನ್ನನ್ನು ಕರೆದಿದ್ದಾರೆ ಆದಕ್ಕೋಸ್ಕರ ನಾನು ನಿಂತಿದ್ದೇನೆ. ಈ ಪದ್ಧತಿಯನ್ನು ಕೇವಲ ಚಂದ್ರಗುತ್ತಿ ಅಷ್ಟೇ ಅಲ್ಲ, ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ಇದೇ ರೀತಿಯಾಗಿ ನಡೆದುಕೊಂಡು ಬರುತ್ತಿದೆ, Over night ಯಾರಿಗೂ ಮಾಡುವುದಕ್ಕೆ ಆಗದಿರಬಹುದು. ನಮ್ಮ ಹತ್ತಿರ ಕನ್‌ವಿನ್‌ಷನ್ ಇರಬೇಕು. ಇಂತಹ ಕಾರ್ಯಕ್ರಮ ತೆಗೆದುಕೊಂಡು, ಹಂತಹಂತವಾಗಿ ನಿಲ್ಲಿಸುತ್ತೇವೆ ಎನ್ನುವ ನಿರ್ಧಾರ ಮಾಡಬೇಕು. ತಾವು ಹೋದಸಲವೂ ಹೇಳಿದಿರಿ. ಇದು ಗುಲ್ಬರ್ಗಾ ಜಿಲ್ಲೆಯಲ್ಲಿ ಒಂದು ಕಡೆ ನಡೆಯುತ್ತಿದೆ, ಇದೇರೀತಿ ಯಲ್ಲಮ್ಮ ದೇವಸ್ಥಾನದಲ್ಲಿ ಈ ಪದ್ಧತಿ ನಡೆಯುತ್ತಿದೆ. ಆದುದರಿಂದ ನಾನು ತಪ್ಪಗೆ ಹೇಳುವುದು, ಕೊನೆಯ ಪಕ್ಷ ಯಾವಾಗ ಜಾತ್ರೆ ನಡೆಯುತ್ತದೆ. ಆಗಲಾದರೂ ಕ್ರಮತೆಗೆದುಕೊಳ್ಳಬೇಕು. ಯಾವುದಾದರೂ ಪಬ್ಲಿಕ್ ಅಂಡರ್ ಟೇಕಿಂಗ್‌ನವರು ಸ್ಟ್ರೈಕ್ ಮಾಡಿದರೆ ಸಾವಿರಾರು ಪೋಲೀಸರನ್ನು ಕರೆಸುತ್ತೀರಿ. ಇದೇರೀತಿ ಇಂತಹ ಜಾತ್ರೆಗಳು ಬಂದಾಗ ಮುಂಜಾಗ್ರತಾ ಕ್ರಮವಾಗಿ, ಅಲ್ಲಿ ೫-೧೦ ಸಾವಿರ ಪೋಲೀಸರನ್ನು ಡಂಪ್ ಮಾಡಿ, ಈ ಕಾರ್ಯಗಳು ಆಗದಂತೆ ನಿಲ್ಲಸಬೇಕು. ತಾವು ಮಂತ್ರಿಗಳಾಗಿದ್ದೀರಿ. ಈ ಸಮಾಜದ ನೋವನ್ನು ಅರಿತುಕೊಂಡು ನೀವು ಮಾಡದೇ ಹೋದರೆ ಮತ್ತೆ ಇನ್ಯಾರು ಮಾಡುತ್ತಾರೆ. ಇವತ್ತು ದಿನನಿತ್ಯ ರೇಡಿಯೋಗಳಲ್ಲಿ ಬರುತ್ತದೆ, ಪೇಪರಿನಲ್ಲಿಬರುತ್ತದೆ, ಅಸ್ಪೃಶ್ಯತೆ ಬಗ್ಗೆ ಬಸ್ಸುಗಳ ಮೇಲೆ ಪ್ರಕಟಣೆ ಹಾಕುವುದನ್ನು ನೋಡುತ್ತೇವೆ. ಟಿ. ವಿ.ಯಲ್ಲಿ ಬರುವುದನ್ನು ನೋಡುತ್ತೇವೆ, ಇದಕ್ಕಾಗಿ ಇಲಾಖೆಯವರು ಸಿನಿಮಾ ತೋರಿಸುತ್ತಾರೆ. ಆದರೂ ಕೂಡ ಇದು ಅಲ್ಲಿ, ಇಲ್ಲಿ ಇದ್ದೇ ಇದೆ. ಇದಕ್ಕೆ consistent persuasion ಬೇಕು. ಇದರ ಬಗ್ಗೆ ಪರಿಶೀಲನೆಯಾಗಬೇಕು ತಾವು ಅನೇಕ ಜಿಲ್ಲೆಗಳಿಗೆ ಹೋಗಿದ್ದೀರಿ ಅಲ್ಲೆಲ್ಲಾ ಏನೇನು ಅನ್ಯಾಯವಾಗಿದೆ ಅತ್ಯಾಚಾರವಾಗಿದೆ. ಇಂತಹ ಜಾತ್ರೆಗಳಲ್ಲಿ ಆಗತಕ್ಕಂಥ ದಬ್ಬಾಳಿಕೆಯನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಸುಮ್ಮನೇ ವಾರ್ತಾ ಇಲಾಖೆಯವರು ಪ್ರಕಟಣೆ ಮಾಡುತ್ತಾರೆ, ಕನ್ನಡ ಸಂಸ್ಕೃತಿ ಇಲಾಖೆಯವರು ಪ್ರಕಟಣೆ ಮಾಡುತ್ತಾರೆ ಎಂದು ಹೇಳಿದರೆ ಸಾಲದು, ಪೋಲೀಸರ ಸಹಾಯ ಪಡೆದು, ರಿಸರ್ವ್ ಪೋಲೀಸ್ ಸಹಾಯ ಪಡೆದು ಇದನ್ನು ನಿಲ್ಲಿಸುವುದಕ್ಕೆ ಇನ್ನು ಮುಂದಾದರೂ ಪ್ರಯತ್ನ ಮಾಡುತ್ತೀರಾ? ಇಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಬಸವಲಿಂಗಪ್ಪನವರು, ಮಾನ್ಯ ಖಿರ್ಗೆಯವರೂ ಹೇಳಿರತಕ್ಕ ವಿಚಾರಗಳು ಬಹಳ ಸ್ಪಷ್ಟವಾಗಿದೆ. ಯಾವುದೇ ಸರ್ಕಾರ ಇದ್ದರೂ, ಸಮಾಜದಲ್ಲಿ ಆಗತಕ್ಕ

ಇಂತಹ ಅನಿಷ್ಟಗಳನ್ನು ನಿಲ್ಲಿಸುವುದಕ್ಕೆ ರಾಜಕೀಯ ದೃಢತೆ ಬೇಕಾಗಿದೆ. ಈ ದೃಢತೆ ಇದೆ, ಆದರೆ ಇದು ಇನ್ನೂ ಹೆಚ್ಚಬೇಕೆಂದು ನನ್ನ ಅಭಿಪ್ರಾಯ. ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಇದನ್ನು ಸರ್ಕಾರ ಮಾಡಬೇಕು, ಒಪ್ಪುತ್ತೇನೆ. ಇದರ ಜೊತೆಗೆ ತಮ್ಮ ಸಹಕಾರವೂ ಬೇಕು. ಸಾರ್ವಜನಿಕ ಅಭಿಪ್ರಾಯ ಮೂಡಿಸುವುದರಲ್ಲಿ ನಾವು, ನೀವು ಇಬ್ಬರೂ ಸೇರಿ ಇದನ್ನು ನಿಲ್ಲಿಸಬೇಕು. It should have a political will. ಇದನ್ನು ನಾನು ಒಪ್ಪುತ್ತೇನೆ, ಸಮಾಜದ ಕಾರ್ಯಕರ್ತರು ಇದರಲ್ಲಿ ಭಾಗವಹಿಸತಕ್ಕಂಥ ಕೆಲಸ ಮಾಡಬೇಕಾಗಿದೆ.

SRI B. BASAVALINGAPPA.—You take law into your own hands and do it. Force is the remedy for social evils.

SRI R. VENKATARAMAIAH.—You must be uncompromising. you should be very harsh. ಇಲ್ಲದೇ ಹೋದರೆ ನಾವಿರಾರು ವರ್ಷಗಳಾದರೂ ಇದು ಇದ್ದೇ ಇರುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಮಾನ್ಯ ನಿರ್ಗಿಯವರ ಮಾತನ್ನು ನಾನು ಒಪ್ಪುತ್ತೇನೆ. ಅವರು ಸಮಾಜ ಕಲ್ಯಾಣ ಮಂತ್ರಿಯಾಗಿ ನೀವು ಏನು ಮಾಡಿದ್ದೀರಿ ಎಂಬ ಪ್ರಶ್ನೆ ಕೇಳಿದ್ದಾರೆ. ಬೆಳಗಾಂನಲ್ಲಿ ಇದರ ಬಗ್ಗೆ ಸಭೆ ಕರೆದು ಅಧಿಕಾರಿಗಳಿಗೆ ಎಚ್ಚರಿಕೆ ಕೊಟ್ಟಿದ್ದೇನೆ. ಹುಬ್ಬಳ್ಳಿಯಲ್ಲಿ ಈ ಸಾಮಾಜಿಕ ಶೋಷಣೆ ಬಗ್ಗೆ ಎರಡು ದಿವಸಗಳ ವರ್ಕ್‌ಷಾಪ್ ತೆಗೆದು, ಈ ಬಗ್ಗೆ ತಿಳುವಳಿಕೆ ಕೊಡಲಾಗಿದೆ. ಇಂತಹ ಅನಿಷ್ಟ ಪದ್ಧತಿಗಳನ್ನು ತಪ್ಪಿಸಬೇಕಾದರೆ ಏನೇನು ಕಾರ್ಯಕ್ರಮ ಕೈಗೊಳ್ಳಬೇಕು, ಯಾರು ಯಾರಿಗೆ ಯಾವ ಯಾವ ಜವಾಬ್ದಾರಿ ಕೊಡಬೇಕೆಂದು ನಿಗಧಿ ಮಾಡಿದ್ದೇನೆ. ಅವರು ಹೇಳಿದಹಾಗೆ ಇದನ್ನು ಕಠಿಣವಾಗಿ ಎದುರಿಸಬೇಕು. ನಿಮ್ಮ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇವೆ. ಏನಿದ್ದರೂ ಅದನ್ನು ನೀವು ರೈಟಿಂಗ್‌ನಲ್ಲಿ ಕೊಡಿ. ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ ಒಂದೇ ಒಂದು ಬಹಳ ಮುಖ್ಯವಾದ ಪ್ರಶ್ನೆ ಇದೆ.

ಅಧ್ಯಕ್ಷರು.—ಆಗುವುದಿಲ್ಲ, ನಾನು ಮುಂದಿನ ಪ್ರಶ್ನೆಯನ್ನು ಕರೆದಿದ್ದೇನೆ, ತಾವು ಕುಳಿತುಕೊಳ್ಳಿ.

ಶ್ರೀ ವೇದಾಂತ ಹೆಮ್ಮಿಗೆ.— ಇದು ಬಹಳ ಮುಖ್ಯವಾದ ಪ್ರಶ್ನೆ. ದೇವರ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಿ ಯಾವುದೋ ಒಂದು ಸ್ಥಳದಲ್ಲಿ ಬೆತ್ತಲೆ ಸೇವೆ ಮುಂತಾದ್ದನ್ನು ನಡೆಸಿ ಈ ದೇಶದ ಹೆಣ್ಣು ಮಕ್ಕಳನ್ನು ಶೋಷಣೆಗೆ ಒಳಪಡಿಸುವುದನ್ನು ತಡೆಯಬೇಕೆಂದು ಆವರು ಹೇಳಿದ್ದಾರೆ. ಅದೇ ರೀತಿ ಈ ದೇಶದಲ್ಲಿ ಗಂಡಸರು ಕೂಡಾ ದೇವರ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಿ ಬೆತ್ತಲೆ ತಿರುಗುತ್ತಾರೆ. ಆ ವ್ಯವಸ್ಥೆ ನಡೆಯುತ್ತಿದೆ. ಅದನ್ನು ನಿಲ್ಲಿಸಲುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಹೆಚ್. ಕೆ. ಪಾಟೀಲ್.—ಧರ್ಮದ ಹೆಸರಿನಲ್ಲಿ ಫಲಾಸಾಫಿಕಲ್ ಆಗಿ ಅದು ನಡೆಯುತ್ತಿದೆ, ಆದರೆ ಬೆತ್ತಲೆ ಸೇವೆ ಮುಂತಾದ್ದು ಮೂಢತನದಿಂದ, ಮೂಢ ನಂಬಿಕೆಯಿಂದ ಮಾಡತಕ್ಕವು. ನಾವೂ ಅವರೂ ಕೂಡಿ ಇದನ್ನು ಬಂದ್ ಮಾಡಬೇಕು. ಹೆಮ್ಮಿಗೆಯವರು ಹೇಳತಕ್ಕದ್ದು ಸರಿಯಿಲ್ಲ. ಜೈನರು ತಮ್ಮ ಧಾರ್ಮಿಕ ಸಂಪ್ರದಾಯವನ್ನು ಅನುಸರಿಸಿ ಆ ರೀತಿ ಮಾಡುತ್ತಾರೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಪಾಟೀಲರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಸಮಾಜದಲ್ಲಿ ವಯಸ್ಸಾದವರು, ನಿರ್ಗತಿಕರು ಏನಿದ್ದಾರೆ, ಮಕ್ಕಳು ಮನೆಯಿಂದ ಹೊರಗೆ ಹಾಕಿದಂಥ ವಯಸ್ಸಾದವರು ಏನಿದ್ದಾರೆ, ಅಂತವರಿಗೆ ಆಶ್ರಮಗಳು ಇವೆ. ಸರಕಾರಿ ಪತಿಯಿಂದ ಒಂದು, ಖಾಸಗಿಯಾಗಿ ನಾಲ್ಕು, ಒಟ್ಟು ಐದು ಇಂತಹ ಆಶ್ರಮಗಳು ಇವೆ. ಅವರನ್ನು ರಿಹ್ಯಾಬಿಲಿಟೇಟ್ ಮಾಡತಕ್ಕ ಆಶ್ರಮಗಳು ಇವೆ.

ಶ್ರೀ ವೇದಾಂತ ಹೆಮ್ಮಿಗೆ.—ಗಂಡಸರು ಬೆತ್ತಲೆ ತಿರುಗುವುದನ್ನು ಧರ್ಮ ಎಂದು ನೀವು ಒಪ್ಪುತ್ತೀರಾ ?

ಅಧ್ಯಕ್ಷರು.—ಇದಕ್ಕೆ ಉತ್ತರ ಹೇಳಬೇಕಾಗಿಲ್ಲ. ಹೆಮ್ಮಿಗೆಯವರೇ ತಾವು ಕುಳಿತುಕೊಳ್ಳಿ.

ಶ್ರೀ ಎನ್. ಎಂ. ಅಡ್ಯಂತಾಯ.—ಶ್ರೀ ಹೆಮ್ಮಿಗೆಯವರು ಪ್ರಮುಖವಾದಂಥ ಪ್ರಶ್ನೆ ಎತ್ತಿದ್ದಾರೆ. ಅವರಿಗೆ ಸರಿಯಾದ ಉತ್ತರ ಬಂದಿಲ್ಲ. ಶ್ರೀ ಹೆಮ್ಮಿಗೆಯವರಿಗೆ ನಾನು ಸಂಪೂರ್ಣ ಸಹಕಾರ ವನ್ನು ಕೊಡುತ್ತೇನೆ.

ಅಧ್ಯಕ್ಷರು.—ಪ್ರತಾಪಚಂದ್ರು ಶೆಟ್ಟಿಯವರು ಮುಂದಿನ ಪ್ರಶ್ನೆ ಕೇಳಬಹುದು.

ಮಂಜರಾಯಿ ದೇವಸ್ಥಾನಗಳ ಆಸ್ತಿ

೧೨೩೬. ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಧಾರ್ಮಿಕ ಹಾಗೂ ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಯ ಆಡಳಿತಕ್ಕೆ ಒಳಪಟ್ಟಿರುವ ದೇವಸ್ಥಾನಗಳು ಹಾಗೂ ಇನ್ನಿತರ ಧಾರ್ಮಿಕ ದತ್ತಿ ಸಂಸ್ಥೆಗಳು ಯಾವುವು (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಈ ಧಾರ್ಮಿಕ ಸಂಸ್ಥೆಗಳು ಹೊಂದಿರುವ ಆಸ್ತಿಯ ಪಟ್ಟಿ ಹಾಗೂ ಅವುಗಳ ಪರಿಸ್ಥಿತಿ

ಇ) ನ್ಯಾಯಾಲಯಗಳಲ್ಲಿ ಮುಂದಿರುವ ಈ ಧಾರ್ಮಿಕ ಸಂಸ್ಥೆಗಳ ಆಸ್ತಿ ವಿವಾದಗಳ ಸಂಖ್ಯೆ ಎಷ್ಟು ?

ಶ್ರೀ ಕೆ. ಅಮರನಾಥ್ ಶೆಟ್ಟಿ (ಧಾರ್ಮಿಕ ಹಾಗೂ ದತ್ತಿ ರಾಜ್ಯಮಂತ್ರಿಗಳು).—

ಅ) ರಾಜ್ಯದಲ್ಲಿ ಮುಜರಾಯಿ ಆಡಳಿತಕ್ಕೆ ಒಳಪಟ್ಟಿರುವ ಒಟ್ಟು ಸಂಸ್ಥೆಗಳ ಸಂಖ್ಯೆ ೪೧೬೦. ಜಿಲ್ಲಾವಾರು ಸಂಸ್ಥೆಗಳ ವಿವರ ಪಟ್ಟಿ ಲಗತ್ತಿಸಿದೆ. ಇನ್ನಿತರ ಧಾರ್ಮಿಕ ಸಂಸ್ಥೆಗಳು ಯಾವುವು ಎಂಬುದರ ಬಗ್ಗೆ ವಿವರ ಲಭ್ಯವಿರುವುದಿಲ್ಲ.

ಆ)		ಎ.	ಗು	ಅಂದಾಜು ಮೌಲ್ಯ
೧	ಇನ್ನು ಉಳಿದ ಕೃಷಿ ಭೂಮಿ	೬೧೫೯	೨೫	೨,೪೬,೮೨,೦೦೦-೦೦
೨	ನಗರ ನಿವೇಶನಗಳು	೭೪		ಅಂದಾಜು ಮಾಡುವುದು ಕಷ್ಟಸಾಧ್ಯ
೩	ಕಟ್ಟಡಗಳು	೪೧೭		ಅಂದಾಜು ಮಾಡುವುದು ಕಷ್ಟಸಾಧ್ಯ
೪	ಒಡವೆಗಳು	೧೧೦೦೯		೬,೨೪,೯೩,೨೪೬-೬೪

ಜಿಲ್ಲಾವಾರು ವಿವರ ಪಟ್ಟಿ ಲಗತ್ತಿಸಿದೆ.

ಇ) ವಿವಿಧ ನ್ಯಾಯಾಲಯಗಳಲ್ಲಿ ಇರುವ ಒಟ್ಟು ಪ್ರಕರಣಗಳ ಸಂಖ್ಯೆ. ೧೩೩ ಇರುತ್ತದೆ.